## ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ ಅರಕಲಗೂಡು

**ಸಿ.ಸಿ.ನಂಃ 44 / 2019**

**ದಿನಾಂಕಃ 24 / 06 /2024**

ಪಿರ್ಯಾದಿ ಃ- ಅರಕಲಗೂಡು ಪೊಲೀಸ್

ಃ ವಿರುದ್ಧ ಃ

ಆರೋಪಿ ಃ- ಸಂತೋಷ ಎನ್.ವಿ. ಬಿನ್ ವಸಂತ

**ಆಪಾದನೆ**

ಶ್ರೀಮತಿ. ಚಂಪಾಶ್ರೀ ಆರ್. ಬಿ.ಎ.ಎಲ್. ಎಲ್‌ಎಲ್.ಬಿ., ಎಲ್.ಎಲ್.ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಅರಕಲಗೂಡು ಆದ ನಾನು, ಆರೋಪಿಯಾದ

ಆರೋಪಿ ಃ ಸಂತೋಷ ಎನ್.ವಿ. ಬಿನ್ ವಸಂತ,
25 ವರ್ಷ,
ನೆಲಬಳ್ಳಿ ಗ್ರಾಮ, ಮಲ್ಲಿಪಟ್ಟಣ ಹೋಬಳಿ,
ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.

ನಿಮ್ಮ ಮೇಲೆ ಆಪಾದನೆ ಮಾಡುವುದೇನೆಂದರೆ

ದಿನಾಂಕಃ 13/11/2018 ರಂದು ಸಂಜೆ ಸುಮಾರು 6-15 ಗಂಟೆ ಸಮಯದಲ್ಲಿ ಅರಕಲಗೂಡು ಪೊಲೀಸ್ ಠಾಣಾ ವ್ಯಾಪ್ತಿಯ ಅರಕಲಗೂಡು-ಹಾಸನ ರಸ್ತೆ ಶೆಟ್ಟಿಗೌಡ ಸರ್ವಿಸ್ ಸ್ಟೇಷನ್ ಮುಂದೆ ಚಾಸಾ-1 ಲಕ್ಷ್ಮಮ್ಮ ರವರ ಮಗ ರಂಗಸ್ವಾಮಿರವರು ಮೆಣಸಿನ ಗಿಡವನ್ನು ತರಲು ಕೆಎ-13-ಇಎನ್-1731 ರ ಬೈಕಿನಲ್ಲಿ ಬಂದು ಮೆಣಸಿನ ಗಿಡಗಳನ್ನು ಆಟೋದಲ್ಲಿ ಕಳುಹಿಸಿ ಬೈಕಿಗೆ ಪೆಟ್ರೋಲ್ ಬಂಕಿನಲ್ಲಿ ಪೆಟ್ರೋಲ್ ಹಾಕಿಸಲು ಎಡಬದಿಯಲ್ಲಿ ಹೋಗುತ್ತಿರುವಾಗ ಆರೋಪಿಯಾದ ನೀವು ಕೆಎ-13-ಇಜಿ-9554 ಬೈಕನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಎಡಬದಿಯಲ್ಲಿ ಸದರಿ ಬೈಕಿನಲ್ಲಿ ಹೋಗುತ್ತಿದ್ದ ಚಾಸಾ-1 ಲಕ್ಷ್ಮಮ್ಮ ರವರ ಮಗ ರಂಗಸ್ವಾಮಿರವರಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತೀರಿ. ಆದ್ದರಿಂದ ಭಾ.ದಂ.ಸಂ. ಕಲಂ 279 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆ ಎಂದು ಆಪಾದಿಸಲಾಗಿದೆ .

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಸದರಿ ಅಪಘಾತದ ಪರಿಣಾಮ ಚಾಸಾ-1 ಲಕ್ಷ್ಮಮ್ಮ ರವರ ಮಗ ರಂಗಸ್ವಾಮಿರವರು ಬೈಕ್ ಸಮೇತ ರಸ್ತೆಯ ಮೇಲೆ ಬಿದ್ದಾಗ ತಲೆಗೆ ತೀವ್ರ ರಕ್ತಗಾಯಗಳಾಗಿದ್ದರಿಂದ ಚಾಸಾ-2 ಅರುಣ್ ರವರು ಅರಕಲಗೂಡು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಹಾಸನಕ್ಕೆ ಕರೆದುಕೊಂಡು ಹೋಗಿ

ವೈದ್ಯರ ಸಲಹೆ ಮೇರೆಗೆ ಬೆಂಗಳೂರಿನ ಕಣ್ವ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸುತ್ತಿರುವಾಗ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕಃ 14/11/2018 ರಂದು ಬೆಳಿಗ್ಗೆ 10-00 ಗಂಟೆಯಲ್ಲಿ ಸದರಿ ಅಪಘಾತದಿಂದ ಆದ ಗಾಯಗಳಿಂದ ಚಾಸಾ-1 ಲಕ್ಷ್ಮಮ್ಮ ರವರ ಮಗ ರಂಗಸ್ವಾಮಿರವರು ಸದರಿ ಆಸ್ಪತ್ರೆಯಲ್ಲಿ ಮೃತಪಡಲು ಕಾರಣರಾಗಿರುತ್ತೀರಿ. ಆದ್ದರಿಂದ ಭಾ.ದಂ.ಸಂ. ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆ ಎಂದು ಆಪಾದಿಸಲಾಗಿದೆ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಕೆಎ-13-ಇಜಿ-9554 ಬೈಕ್ ನಿಂದ ಚಾಸಾ-1 ಲಕ್ಷ್ಮಮ್ಮ ರವರ ಮಗ ರಂಗಸ್ವಾಮಿರವರಿಗೆ ಡಿಕ್ಕಿಪಡಿಸಿ ವಾಹನವನ್ನು ನಿಲ್ಲಿಸದೇ ಪೊಲೀಸರಿಗೆ ಮಾಹಿತಿ ನೀಡದೇ ಗಾಯಾಳುವಿಗೆ ಚಿಕಿತ್ಸೆಯನ್ನು ಕೊಡಿಸದೇ ಹೊರಟು ಹೋಗಿರುತ್ತೀರಿ ಆದ್ದರಿಂದ ಮೋಟಾರು ವಾಹನ ಕಾಯ್ದೆ ಕಲಂ 187 ರ ಅನ್ವಯ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರ-1. ನಿಮಗೆ ಮೇಲಿನ ಅಪಾದನೆಯ ಸಾರಾಂಶ ತಿಳಿಯಿತೇ ?

ಉತ್ತರಃ

**ಪ್ರ-2.** ಮೇಲಿನ ಆಪಾದನೆಯನ್ನು ಒಪ್ಪುವಿರಾ ? ಪ್ರತಿರಕ್ಷೆ ಇದೆಯಾ ?

ಉತ್ತರಃ

(ಆರೋಪಿಗೆ ಆಪಾದನೆಯನ್ನು ರಚಿಸಿ ವಿವರಿಸಿ ಓದಿ ಹೇಳಿದ್ದು ಆ ಪ್ರಕಾರವಾಗಿ ಆತ ಕೊಟ್ಟ ಉತ್ತರವನ್ನು ಮುಕ್ತ ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ)

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಅರಕಲಗೂಡು